# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

**Email Id: adpiqsection@gmail.com** **Phone No: 080-23460525**

ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಮು.ಪರೀಕ್ಷೆ/ಆಗಸ್ಟ್-2021/05/2021-22 ದಿನಾಂಕ: 02/07/2021

## ಅಧಿಸೂಚನೆ

ವಿಷಯ:- ಆಗಸ್ಟ್-2021ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಗೆ ರಾಜ್ಯದ ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ:ಇಡಿ.218.ಎಸ್.ಎಲ್.ಬಿ.2016;ಬೆಂಗಳೂರು; ದಿನಾಂಕ:14.12.2016.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಪಠ್ಯಕ್ರಮ ಪರಿಷ್ಕೃತ 2016 ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಷನ್ ಡಿ.ಎಲ್.ಎಡ್ ನಿಯಮಗಳಿಗೆ ನೀಡಿರುವ ಸ್ಪಷ್ಟೀಕರಣ ಪತ್ರ ಸಂಖ್ಯೆ: ಶಿತ1/ಡಿ.ಎಲ್.ಎಡ್/ಪ.ನಿ/01/2016-17; ದಿನಾಂಕ:30.01.2017ರ ಸ್ಪಷ್ಟೀಕರಣ.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಸುತ್ತೋಲೆ ಸಂಖ್ಯೆ:ಶಿತ2/ಡಿಪಿಐ/ಡಿಎಸ್‌ಇಆರ್‌ಟಿ/ ಡಿ.ಇಡಿಕಾ/01/2018/27008/16; ದಿನಾಂಕ:17.05.2018.
4. ದಿನಾಂಕ:28/08/2020ರಂದು ಡಿ.ಎಸ್.ಇ.ಆರ್.ಟಿ.ಯಲ್ಲಿ ನಡೆದ ಸಭೆಯ ನಡಾವಳಿ.

************

2020-21ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ವಾರ್ಷಿಕ ಕಾರ್ಯ ಯೋಜನೆಯಂತೆ ಶೈಕ್ಷಣಿಕ ಅವಧಿಯ ಪರೀಕ್ಷೆಗಳನ್ನು ಆಗಸ್ಟ್- 2021ರ ಮೊದಲ ವಾರದಿಂದ ನಡೆಸಲು ತೀರ್ಮಾನಿಸಲಾಗಿದೆ. ಅದರಂತೆ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಹೊಸ ಮತ್ತು ಪುನರಾವರ್ತಿತ ಅಭ್ಯರ್ಥಿಗಳಿಗೆ ಲಿಖಿತ (ಥಿಯರಿ) ಪರೀಕ್ಷೆಯನ್ನು ದಿನಾಂಕ:05/08/2021 ರಿಂದ ದಿನಾಂಕ:11/08/2021 ರವರೆಗೆ ನಡೆಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 2019-20ನೇ ಸಾಲಿನಿಂದ ಡಿ.ಇಎಲ್.ಇಡಿ ಪರೀಕ್ಷಾ ಪ್ರಕ್ರಿಯೆಗಳನ್ನು Online ವ್ಯವಸ್ಥೆಗೆ ತರಲಾಗಿದೆ. ಈ ಹಿನ್ನಲೆಯಲ್ಲಿ ಈ ಬಾರಿ ಡಿ.ಇಎಲ್.ಇಡಿ. ಪರೀಕ್ಷೆಗೆ Online ಮೂಲಕ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಹೊರಡಿಸಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಡಿ.ಇಡಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುತ್ತಾರೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಅರ್ಜಿ ನಮೂನೆಯಲ್ಲಿ ಮಂಡಳಿಯ

https://sslc.karnataka.gov.in ಜಾಲತಾಣದಲ್ಲಿ Login/Other Exams/DEled Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

## 2. ದಾಖಲಾತಿ ಅನುಮೋದನಾ ಪಟ್ಟಿ:-

ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಮಾನ್ಯತೆ ಪಡೆದು ಅಸ್ತಿತ್ವದಲ್ಲಿರುವ ಖಾಸಗಿ ಡಿ.ಇಎಲ್.ಇಡಿ ಕಾಲೇಜುಗಳಿಗೆ ಸಂಬಂಧಿಸಿದಂತೆ, ಉಲ್ಲೇಖ(2)ರ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ನಿರ್ದೇಶನ ಮತ್ತು ಮಾರ್ಗದರ್ಶನಗಳಂತೆ, ಉಲ್ಲೇಖ (3)ರ ಆದೇಶ ಮತ್ತು ಸ್ಪಷ್ಟೀಕರಣಗಳಂತೆ ಜಿಲ್ಲಾ ಡಯಟ್ ಪ್ರಾಂಶುಪಾಲರು ಡಿ.ಇಎಲ್.ಇಡಿ ಅಭ್ಯರ್ಥಿಗಳ ನಾಮಪಟ್ಟಿಯನ್ನು (Nominal Roll) ಪರಿಶೀಲಿಸಿ ಅನುಮೋದಿಸುವುದು.

## 3. ಪರೀಕ್ಷಾ ಶುಲ್ಕದ ವಿವರ:-

### 3.1 ಹೊಸ ಅಭ್ಯರ್ಥಿಗಳಿಗೆ

| ಕ್ರಮ ಸಂಖ್ಯೆ | ಪರೀಕ್ಷೆ | ಒಟ್ಟು ಶುಲ್ಕ |
|---|---|---|
| 01 | ಪ್ರಥಮ ಡಿ.ಇಎಲ್.ಇಡಿ | 1132-00 |
| 02 | ದ್ವಿತೀಯ ಡಿ.ಇಎಲ್.ಇಡಿ | 1170-00 |

**(ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ1 ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದ್ದು ಲ್ಯಾಮಿನೇಷನ್ ಶುಲ್ಕವನ್ನು ಮಾತ್ರ ಪಾವತಿಸಬೇಕು.ಲ್ಯಾಮಿನೇಶನ್ ಶುಲ್ಕ ಪ್ರಥಮ ಡಿಇಎಲ್ಇಡಿ. ಅಭ್ಯರ್ಥಿಗಳಿಗೆ ರೂ. 25/- ಹಾಗೂ ದ್ವಿತೀಯ ಡಿ.ಇಎಲ್.ಇಡಿ. ಅಭ್ಯರ್ಥಿಗಳಿಗೆ ರೂ.50/- ಪಾವತಿಸುವುದು.)**

### 3.2 ಪುನರಾವರ್ತಿತ ಅಭ್ಯರ್ಥಿಗಳಿಗೆ

| ಕ್ರಮ ಸಂಖ್ಯೆ | ಪರೀಕ್ಷೆ | ಒಟ್ಟು ಶುಲ್ಕ |
|---|---|---|
| 01 | ಒಂದು ವಿಷಯಕ್ಕೆ | 300-00 |
| 02 | ಎರಡು ವಿಷಯಗಳಿಗೆ | 600-00 |
| 03 | ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿಗೆ | 1080-00 |

## 4. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸದರಿ ಚಲನ್ ಅನ್ನು Login ನಿಂದ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.

- ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅಭ್ಯರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್/ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕು.
- ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.

5.ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ.

| ಕ್ರ.ಸಂ | ವಿವರ | ದಿನಾಂಕ: |
|---|---|---|
| 1. | ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಪ್ರಕಟಣೆ ದಿನಾಂಕ | 02/07/2021 |
| 2. | ಸಂಸ್ಥೆಯ ಲಾಗಿನ್‌ನಲ್ಲಿ ಮಾನ್ಯತೆ ನವೀಕರಣ ಪ್ರತಿಯನ್ನು ಅಪ್‌ಲೋಡ್ ಮಾಡುವುದು ಹಾಗೂ ನೊಂದಣಿಶುಲ್ಕ 1300/–ಗಳನ್ನು ಪಾವತಿಸುವ ದಿನಾಂಕ | 05/07/2021 |
| 3. | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | 05/07/2021 |
| 4. | ಮಾನ್ಯತೆ ಪಡೆದ ಡಿಇಎಲ್ಇಡಿ ಸಂಸ್ಥೆಗಳ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಡಯಟ್ ಹಂತದಲ್ಲಿ ಅನುಮೋದಿಸುವುದು | 05/07/2021 ರಿಂದ 07/07/2021 |
| 5. | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 12/07/2021 |
| 6. | ದಂಡ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 14/07/2021 |
| 7. | ಆಗಸ್ಟ್–2021 ರ ಡಿಇಎಲ್ಇಡಿ ಪರೀಕ್ಷೆಗೆ ಆನ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 16/07/2021 |
| 8. | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 19/07/2021 |
| 9. | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಭಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 22/07/2021 |
| 10. | ಪ್ರವೇಶ ಪತ್ರ ಗಳನ್ನು ಆನ್‌ಲೈನ್‌ಅಲ್ಲಿ ಪ್ರಕಟಿಸುವ ದಿನಾಂಕ | 26/07/2021 |
| 11. | ಪ್ರವೇಶ ಪತ್ರಗಳಲ್ಲಿನ ದೋಷಗಳನ್ನು ಆನ್‌ಲೈನ್‌ನಲ್ಲಿ ತಿದ್ದುಪಡಿ ಮಾಡಲು ಅಂತಿಮ ದಿನಾಂಕ | 28/07/2021 |
| 12. | ಅಂತಿಮ ಪ್ರವೇಶ ಪತ್ರಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ | 29/07/2021 |
| 13. | ಸಿಎನ್‌ಆರ್ ಮತ್ತು ಎ.ಎಂ.ಎಲ್ ಗಳನ್ನು ಪರೀಕ್ಷಾ ಕೇಂದ್ರದ ಲಾಗಿನ್‌ನಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ | 02/08/2021 |

6. ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

(ಆನ್‌ಲೈನ್‌ನಲ್ಲಿ ಸಂಸ್ಥೆಗಳ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿ ಅಪಲೋಡ್ ಮಾಡುವುದು, ಮಾನ್ಯತೆ ನವೀಕರಣ ಶುಲ್ಕ ಪಾವತಿಸುವ ಹಾಗೂ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಅನುಕೂಲವಾಗುವಂತೆ **FlowChart** ನೀಡಲಾಗಿದ್ದು ಅದನ್ನು ಕಡ್ಡಾಯವಾಗಿ ಓದಿಕೊಳ್ಳುವುದು.)

1 ಆಗಸ್ಟ್-2021 ಡಿಇಎಲ್ಇಡಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೊಂದಣಿ ಮಾಹಿತಿಯನ್ನು ಮಂಡಳಿಯ ಜಾಲತಾಣದಲ್ಲಿ Login/Other Exams/DEled Examination ನಲ್ಲಿ Login ಮೂಲಕ Upload ಮಾಡಲು ಸೂಚಿಸಿದೆ.

2 **ಕಡ್ಡಾಯವಾಗಿ ಡಿಇಎಲ್ಇಡಿ ಕಾಲೇಜಿನ ಪ್ರಸಕ್ತ ವರ್ಷದ ಮಾನ್ಯತೆ/ಮಾನ್ಯತೆ ನವೀಕರಣ ಪಡೆದಿರುವುದಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಜ್ಞಾಪನ ಪತ್ರದ ಪ್ರತಿಯನ್ನು pdf ನಮೂನೆ (Up to 1mb size)** ಯಲ್ಲಿ Upload ಮಾಡಬೇಕು. ಇದನ್ನು ಆಯಾ ಡಯಟ್‌ಗಳು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

3 ಡಿಇಎಲ್ಇಡಿ ಕಾಲೇಜುಗಳ ನೋಂದಣಿ ಶುಲ್ಕ ರೂ. 1300-00ಗಳನ್ನು Online ಲಾಗಿನ್‌ನಲ್ಲಿ ಲಭ್ಯ ಮಾಡುವ Challan ಮೂಲಕ ಪಾವತಿಸಬೇಕು. ಚಲನ್‌ನ ಜೆರಾಕ್ಸ್ ಪ್ರತಿಯನ್ನು ಪ್ರತ್ಯೇಕವಾಗಿ ಡಯಟ್ ಮೂಲಕ ಮಂಡಳಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

4 ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಪೋನ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು.

5 **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ-1ರ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದ್ದು ಲ್ಯಾಮಿನೇಷನ್ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಹಾಗೂ /ಪ್ರವರ್ಗ1 ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ರೂ. 1.00 ಲಕ್ಷದವರೆಗಿನ ಆದಾಯಮಿತಿ ಹೊಂದಿರಬೇಕು. ಅದಕ್ಕೆ ಸಂಬಂಧಿಸಿದ ಜಾತಿ ಮತ್ತು ಆದಾಯ ಪ್ರಮಾಣಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.**

6 Online ಮೂಲಕ ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ನಿಗಧಿಪಡಿಸಿದ ದಿನಾಂಕದೊಳಗೆ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು. ಡಯಟ್ ಸಂಸ್ಥೆಯವರು ಅನುಮೋದನೆ ಮಾಡಿದ ನಂತರ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

7 ಒಂದು ವೇಳೆ ಸಂಸ್ಥೆಯ ಹಂತದಲ್ಲಿ Submit ಮಾಡಿದ ನಂತರ ದೋಷಗಳು ಗಮನಕ್ಕೆ ಬಂದಲ್ಲಿ ಸೂಕ್ತ ದಾಖಲೆ ಮತ್ತು ವಿವರಣೆಗಳನ್ನು ನೀಡಿ ಡಯಟ್‌ನಿಂದ ಅನುಮೋದನೆ ಆಗುವ ಮೊದಲು ಡಯಟ್ ಪ್ರಾಂಶುಪಾಲರು ತಿದ್ದುಪಡಿ ಮಾಡಬಹುದಾಗಿದೆ.

8 ಪ್ರವೇಶ ಪತ್ರ/ನಾಮಿನಲ್‌ರೋಲ್ ಪ್ರಕಟಿಸಿದಾಗ ತಿದ್ದುಪಡಿಗೆ ಅವಕಾಶ ನೀಡಲಾಗುವುದು.

9 ನಿಗದಿಪಡಿಸಿದ ದಿನಾಂಕದ ನಂತರ ವಿಷಯ/ಮಾಧ್ಯಮ ಇತ್ಯಾದಿ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ತಿದ್ದುಪಡಿಗೆ **ರೂ.200.00** ದಂಡ ವಿಧಿಸಲಾಗುವುದು.

10 ಮಂಡಳಿಯ ಗಮನಕ್ಕೆ ತರದೇ ಅಭ್ಯರ್ಥಿಗಳ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶ ಇರುವುದಿಲ್ಲ.

11 **ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳ ನೇರಭಂಗಿಯ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.**

12 **ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್ ಲೋಡ್ ಮಾಡಬೇಕೇ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**

13 ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

14 ಪ್ರಥಮ ಡಿಇಎಲ್‌ಇಡಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮಾರ್ಚ್ 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ್ದಲ್ಲಿ ಅಥವಾ ಮುಕ್ತ ಶಾಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಥವಾ ಕೇಂದ್ರ ಪಠ್ಯಕ್ರಮದ ಪರೀಕ್ಷಾ ಮಂಡಳಿ ಅಥವಾ ಬೇರೆ ರಾಜ್ಯಗಳ ಪರೀಕ್ಷಾ ಮಂಡಳಿ ನಡೆಸಿದ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಮುಖ್ಯಸ್ಥರು ಅಂಕಪಟ್ಟಿಗಳನ್ನು ಪರಿಶೀಲಿಸಿ ಸೂಕ್ತ ಕಾಲಂನಲ್ಲಿ ವಿವರಗಳನ್ನು ಭರ್ತಿ ಮಾಡಿ **Upload** ಮಾಡಬೇಕು, ಈ ಅಭ್ಯರ್ಥಿಗಳ ವಿವರಗಳು **AUTO FETCH** ಆಗುವುದಿಲ್ಲವಾದ್ದರಿಂದ **Online** ಅರ್ಜಿಯಲ್ಲಿನ ಎಲ್ಲಾ ಅಂಕಣಗಳನ್ನು ಭರ್ತಿಮಾಡಬೇಕು.

15 ಪ್ರಥಮ ಡಿಇಎಲ್‌ಇಡಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು 2003 ಹಾಗೂ 2003ರ ನಂತರದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ ಮಾಹಿತಿಗಳು **AUTO FETCH** ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.

16 ದ್ವಿತೀಯ ಡಿಇಎಲ್‌ಇಡಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಪ್ರಥಮ ಡಿಇಎಲ್‌ಇಡಿ ಪರೀಕ್ಷೆಯ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ ಮಾಹಿತಿಗಳು **AUTO FETCH** ಆಗುತ್ತವೆ.

17 ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆ ಮೂಲಕ **AUTOFETCH** ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

18 ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಡಯಟ್‌ಗೆ ಸಲ್ಲಿಸುವುದು.

19 ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮುಖಾಂತರ ದ್ವಿತೀಯ ಡಿ.ಇಎಲ್.ಇಡಿಗೆ ಅಭ್ಯರ್ಥಿ ದಾಖಲಾಗಿದ್ದರೆ, ಅಂತಹ ಅಭ್ಯರ್ಥಿಯ ಹೆಸರನ್ನು ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಸೇರ್ಪಡೆ ಮಾಡುವುದು. ಅಲ್ಲದೇ ಯಾವ ಸಂಸ್ಥೆಯಿಂದ ವರ್ಗಾವಣೆ ಹೊಂದಿದ್ದಾರೆ ಎಂಬುದಕ್ಕೆ ಷರಾ ಕಾಲಂನಲ್ಲಿ ಸಂಸ್ಥೆಯ ಸಂಕೇತ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು. ಈ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದ ಆದೇಶದ ಪ್ರತಿ ಸಲ್ಲಿಸುವುದು.

20 ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಡಿಇಎಲ್‌ಇಡಿ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

### 7. ಪುನರ್ ದಾಖಲಾತಿ ಹೊಂದಿರುವ ಅಭ್ಯರ್ಥಿಗಳ ಮಾಹಿತಿ ಬಗ್ಗೆ:-

ದ್ವಿತೀಯ ಡಿ.ಇಎಲ್.ಇಡಿಗೆ ಜಿಲ್ಲೆಯೊಳಗೆ ಪುನರ್‌ದಾಖಲಾತಿಯಾಗಿದ್ದಲ್ಲಿ, ಜಿಲ್ಲಾ ಡಯಟ್ ಪ್ರಾಂಶುಪಾಲರ ಜ್ಞಾಪನ ಆದೇಶವಿರಬೇಕು. ಅಂತರ್ ಜಿಲ್ಲಾ ಪುನರ್ ದಾಖಲಾತಿಯಾಗಿದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಂದ ಅನುಮತಿ ಪಡೆದಿರುವ ಜ್ಞಾಪನ ಆದೇಶವಿರಬೇಕು. ದ್ವಿತೀಯ ಡಿ.ಇಎಲ್.ಇಡಿಗೆ ಪುನರ್ ದಾಖಲಾತಿ ಹೊಂದುವ ಅಭ್ಯರ್ಥಿಗಳು ಪರಿಷ್ಕೃತ ಪಠ್ಯವಸ್ತುವಿನಂತೆ (Revised Syllabus) ನಂತೆ ಪರೀಕ್ಷೆ ಬರೆಯಬೇಕು. ವರ್ಗಾವಣೆ ಅಥವಾ ಪುನರ್‌ದಾಖಲಾತಿಗೆ

ಸಂಬಂಧಿಸಿದಂತೆ ಡಯಟ್ ಪ್ರಾಂಶುಪಾಲರ ಹಂತದಲ್ಲಿಯೇ ಪರಿಶೀಲಿಸಿ ಅನುಮೋದಿಸುವುದು. ಈ ಮಾಹಿತಿಯನ್ನು ಡಯಟ್‌ನಿಂದ ಮಂಡಳಿಗೆ ಸಲ್ಲಿಸಿದ ನಂತರ Online ನಲ್ಲಿ ಸಂಬಂಧಿಸಿದ ಅಭ್ಯರ್ಥಿಯ ಅರ್ಜಿಯನ್ನು Upload ಮಾಡಲಾಗುವುದು.

**8. ಐಚ್ಛಿಕ ವಿಷಯದ ಆಯ್ಕೆ:-**

ಐಚ್ಛಿಕ ವಿಷಯಗಳ ಆಯ್ಕೆಯಲ್ಲಿ ಅಭ್ಯರ್ಥಿಯು ಒಂದು ಐಚ್ಛಿಕ ವಿಷಯವನ್ನು ಮಾತ್ರ ಆಯ್ಕೆ ಮಾಡಬೇಕು. ಹೀಗೆ ಆಯ್ಕೆ ಮಾಡುವಾಗ ತಪ್ಪಾಗಿ ಆಯ್ಕೆ ಮಾಡಿದರೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

**9.ಹಾಜರಾತಿ ವಿನಾಯಿತಿ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಹೊಸ ಅಭ್ಯರ್ಥಿಗಳ ಶೈಕ್ಷಣಿಕ ವರ್ಷದ ಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇಕಡ 80ರಷ್ಟು ಹಾಜರಾತಿ ಇರುವುದು ಕಡ್ಡಾಯ. ಶೇಕಡ 80ರಷ್ಟು ಹಾಜರಾತಿ ಇಲ್ಲದ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಶೇ.10ರಷ್ಟು ವಿನಾಯಿತಿಯನ್ನು ನೀಡಲು ಸಂಸ್ಥೆಯ ಪ್ರಾಂಶುಪಾಲರಿಗೆ ಅವಕಾಶವಿದೆ ಹಾಗೂ ಮಂಡಳಿಯು ಹೆಚ್ಚುವರಿಯಾಗಿ ಶೇ.05ರಷ್ಟು ಗೈರುಹಾಜರಿಯನ್ನು ಮನ್ನಾ ಮಾಡುತ್ತದೆ. ಅಂದರೆ, ಸಂಸ್ಥೆಯ ಪ್ರಾಂಶುಪಾಲರು ನೀಡುವ ಶೇ10ರ ವಿನಾಯಿತಿ ನಂತರ ಶೇ 5ರಷ್ಟು ಹಾಜರಾತಿ ವಿನಾಯಿತಿಯನ್ನು ಮಂಡಳಿಯು ಮನ್ನಾ ಮಾಡುತ್ತದೆ. ಅಂತಹ ಪ್ರಕರಣಗಳ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ಆಯಾ ಡಯಟ್ ಪ್ರಾಂಶುಪಾಲರ ಮುಖಾಂತರ ಸೂಕ್ತ ದಾಖಲೆ ಹಾಗೂ ವಿವರಣೆಗಳೊಂದಿಗೆ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿ ಸಾಕಷ್ಟು ಮುಂಚಿತವಾಗಿ ಮಂಡಳಿಯ ಅನುಮತಿ ಪಡೆಯುವುದು.

**10.ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ:-**

ಪ್ರಥಮ/ದ್ವಿತೀಯ ಡಿ.ಇಎಲ್.ಇಡಿ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಮಂಡಳಿಯಿಂದ ಅನುಮತಿ ಪಡೆದಿರಬೇಕು. ಅನುಮತಿ ಪಡೆದಿರುವ ಆದೇಶದ ಪ್ರತಿಯೊಂದಿಗೆ ಡಯಟ್ ಮುಖಾಂತರ ಮಂಡಳಿಗೆ ಸಲ್ಲಿಸಬೇಕು. ತದನಂತರ ಸಂಬಂಧಿಸಿದ ಸಂಸ್ಥೆಯ Login ಗೆ ಆ ಅಭ್ಯರ್ಥಿಯ ಅರ್ಜಿ ನಮೂನೆಯನ್ನು Upload ಮಾಡಲಾಗುವುದು.

**11. ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟಿಸಿರುವ (ಎಂ.ಎಲ್.ಪಿ) ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಚಾಟನೆಗೊಂಡಿರುವ ಅಭ್ಯರ್ಥಿಗಳ ಉಚ್ಚಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ಅಭ್ಯರ್ಥಿಗಳು ಆಗಸ್ಟ್-2021ರ ಮುಖ್ಯ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್‌ನ್ನು ನೇರವಾಗಿ ಡಯಟ್ ಮೂಲಕ ಮಂಡಳಿಗೆ ಸಲ್ಲಿಸುವುದು. ಮಂಡಳಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಂಡಳಿಯಿಂದ ಪ್ರತ್ಯೇಕವಾಗಿ Online ಅರ್ಜಿ Upload ಮಾಡಲಾಗುವುದು.

**12. ವಿಭಿನ್ನ ಸಾಮರ್ಥ್ಯವುಳ್ಳ ಅಭ್ಯರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-**

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿಕಲಚೇತನ ಅಭ್ಯರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ98/ಇಎಸ್‌ಡಬ್ಲ್ಯೂ2009 ದಿನಾಂಕ:10.06.2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ

ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

## 13. ಪ್ರಥಮ ಡಿ.ಇಎಲ್.ಇಡಿ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| ಶಿಕ್ಷಣ: ಮೂಲ ಪರಿಕಲ್ಪನೆಗಳ ಪರಿಚಯ<br>Education-Introduction to Basic Concepts | 302 | 60 | 3 ಗಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) ಪ್ರಥಮ ಭಾಷೆ<br>Facilitating Learning (LPS) – First Language<br>ಕನ್ನಡ–Kannada | 304K | 60 | 3 ಗಂಟೆ |
| ಹಿಂದಿ– Hindi | 306H | | |
| ಉರ್ದು – Urdu | 308U | | |
| ಮರಾಠಿ – Marati | 310M | | |
| ತಮಿಳು – Tamil | 312T | | |
| ತೆಲುಗು – Telugu | 314L | | |
| ಕಲಿಕೆಯನ್ನು ಅನುಕೂಲಿಸುವುದು–ಗಣಿತ<br>Facilitating Learning (LPS) -Mathematics | 316 | 60 | 3 ಗಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) – ಪರಿಸರ ಅಧ್ಯಯನ<br>Facilitating Learning (LPS)-Environmental Studies | 318 | 60 | 3 ಗಂಟೆ |
| ಇಂಗ್ಲೀಷ್ ಸಂವಹನಾ ಕೌಶಲಗಳು<br>Communication Skills In English | 320 | 25 | 1 1/2 ಗಂಟೆ |
| ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ<br>Educational Assessment & Evaluation | 322 | 30 | 1 1/2 ಗಂಟೆ |

## 14. 320E ಇಂಗ್ಲೀಷ್ ಸಂವಹನಾ ಸಾಮರ್ಥ್ಯ (Communication Skills in English) ಪರೀಕ್ಷೆ ನಡೆಸುವ ಬಗ್ಗೆ:–

1. ಪರಿಷ್ಕೃತ ಪಠ್ಯವಸ್ತುವಿನಂತೆ, ಇಂಗ್ಲೀಷಿನಲ್ಲಿ ಸಂವಹನಾ ಸಾಮರ್ಥ್ಯ–320E Communication Skills in English ಈ ವಿಷಯದ ಪ್ರಶ್ನೆ ಪತ್ರಿಕೆ ಗರಿಷ್ಠ 25 ಅಂಕಗಳಿಗೆ ನಿಗಧಿಪಡಿಸಿದೆ.

   ಪರಿಷ್ಕೃತ ಪಠ್ಯವಸ್ತುವಿನನ್ವಯ ಪ್ರಥಮ D.El.Ed Communicaton Skills in English-320E ಇಂಗ್ಲೀಷ್‌ನಲ್ಲಿ ಸಂವಹನಾ ಕೌಶಲಗಳು ವಿಷಯಕ್ಕೆ ಆಂತರಿಕ ಅಂಕಗಳು 25 ನಿಗಧಿಪಡಿಸಿದ್ದು, ಇದರಲ್ಲಿ 05 ಅಂಕಗಳ ಮೌಖಿಕ

ಪರೀಕ್ಷೆಯನ್ನು ನಡೆಸುವುದು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಡಯಟ್ ಪ್ರಾಂಶುಪಾಲರಿಂದ ರಚಿಸಲಾಗುವ ಸಮನ್ವಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಈ ಬಗ್ಗೆ ಪರಿಶೀಲಿಸಬೇಕು.

**15. ದ್ವಿತೀಯ ಡಿ.ಇಎಲ್.ಇಡಿ ಬಾಹ್ಯ ವಿಷಯಗಳ ವಿವರ, ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ,**

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು<br>ಪರಿಷ್ಕೃತ ಪಠ್ಯವಸ್ತು (RS) | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| ರೂಢಿಯಾಗಿ ಶಿಕ್ಷಣ<br>Education as Practice | 442 | 60 | 3 ಗಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ) ಪ್ರಥಮ ಭಾಷೆ<br>Facilitating Learning (HPS) – First Language<br>ಕನ್ನಡ–Kannada | 444K | 60. | 3 ಗಂಟೆ |
| ಹಿಂದಿ– Hindi | 446H | | |
| ಉರ್ದು – Urdu | 448U | | |
| ಮರಾಠಿ – Marati | 450M | | |
| ತಮಿಳು – Tamil | 452T | | |
| ತೆಲುಗು – Telugu | 454L | | |
| ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ)–ಇಂಗ್ಲೀಷ್<br>Facilitating Learning (HPS)-English | 456 | 60 | 3 ಗಂಟೆ |
| ಐಚ್ಛಿಕ ವಿಷಯಗಳು (ಯಾವುದಾದರೂ ಒಂದು)<br>Optional Subjects (Any one) | | 60 | 3 ಗಂಟೆ |
| ವಿಜ್ಞಾನ– Science | 458 | | |
| ಗಣಿತ – Mathematics | 460 | | |
| ಸಮಾಜ ವಿಜ್ಞಾನ – Social Science | 462 | | |

**16. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ ಬಗ್ಗೆ:–**

ಜನವರಿ–2021ರ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಅಭ್ಯರ್ಥಿಗಳ ಎಂ.ಎಸ್.ಎ (Marks Statement Cum Applications) ಗಳ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ಅಳವಡಿಸಲಾಗಿದೆ. ಈ ಅಭ್ಯರ್ಥಿಗಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ನಿಗಧಿತ ಶುಲ್ಕ ಪಾವತಿಸಿ ಸಲ್ಲಿಸುವುದು. ಅನುತ್ತೀರ್ಣ ಅಭ್ಯರ್ಥಿಗಳ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳ ಭಾವಚಿತ್ರ 60 ರಿಂದ 80 KB ಅಳತೆ ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ. ಇದನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು DIET Login ಪರಿಶೀಲಿಸಿ ಅನುಮೋದನೆ ಮಾಡುವುದು.

**17. ಪ್ರಯತ್ನಗಳ ಮಿತಿ:–**

ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗ ಮಾಡಿದ ವರ್ಷದಿಂದ ಮೂರು ವರ್ಷ ಅಥವಾ ಸತತ ಆರು ಪ್ರಯತ್ನದೊಳಗೆ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಬೇಕು. ಅದರನ್ವಯ ಪರೀಕ್ಷೆ ತೆಗೆದುಕೊಂಡಿರುವ /ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಅಂತಿಮ ಕಾಲಾವಕಾಶವಾಗುತ್ತದೆ.

| ಕ್ರಮ ಸಂಖ್ಯೆ | ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗ ಮಾಡಿದ ಶೈಕ್ಷಣಿಕ ವರ್ಷದ ಮುಖ್ಯ ಪರೀಕ್ಷೆ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| 01 | ಮೇ–ಜೂನ್ 2019 | ಡಿಸೆಂಬರ್ 2021/ಜನವರಿ 2022 |
| 02 | ಮೇ–ಜೂನ್ 2020 | ಡಿಸೆಂಬರ್ 2022/ಜನವರಿ 2023 |

ಈ ಹಿಂದೆ ಜೂನ್ 2019ರಲ್ಲಿ ದ್ವಿತೀಯ ಡಿ.ಇಡಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಗರಿಷ್ಠ ಆರು ಪ್ರಯತ್ನಗಳ ಮಿತಿ ಜನವರಿ 2021ಕ್ಕೆ ಮುಗಿದಿರುತ್ತದೆ. **ಅದೇ ರೀತಿ ಜೂನ್–2019ರಲ್ಲಿ ದ್ವಿತೀಯ ಡಿ.ಇಎಲ್.ಇಡಿ ಪಠ್ಯವಸ್ತುವಿನಂತೆ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ಡಿಸೆಂಬರ್ 2021/ಜನವರಿ 2022ರ ಪರೀಕ್ಷೆ ಅಂತಿಮ ಅವಕಾಶವಾಗಿದೆ. ಈ ವಿಚಾರವನ್ನು ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಂದು ಅಂತಿಮ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು. ಅಂತಿಮ ಕಾಲಾವಕಾಶದ ಬಗ್ಗೆ ಮನದಟ್ಟು ಮಾಡುವುದು. ವ್ಯಾಪಕ ಪ್ರಚಾರ ಮಾಡುವುದು. ಆಯಾ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ.**

**18. ಡಯಟ್ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ಕರ್ತವ್ಯಗಳು. ಹಾಗೂ ಗಮನಿಸಬೇಕಾದ ಅಂಶಗಳು:**

- ಡಿ.ಇಎಲ್.ಇಡಿ ಕಾಲೇಜು ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವುದನ್ನು ಹಾಗೂ ರೂ.1300/– ಶುಲ್ಕವನ್ನು ಪಾವತಿಸಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಅನುಮೋದನೆ ಮಾಡಬೇಕು. ಎನ್.ಸಿ.ಟಿ.ಇ ಮಾನ್ಯತೆ ಪಡೆಯದ ಅನಧಿಕೃತ ಸಂಸ್ಥೆಗಳ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಎನ್.ಸಿ.ಟಿ.ಇ ಮಾನ್ಯತೆ ಹಿಂಪಡೆದ ಡಿ.ಇಎಲ್.ಇಡಿ ಕಾಲೇಜುಗಳ ಅಭ್ಯರ್ಥಿಗಳು ಸಹ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಸರ್ಕಾರ ಅಥವಾ ಎನ್.ಸಿ.ಟಿ.ಇ ಯಿಂದ ನಿಗಧಿಪಡಿಸಿರುವ ದಾಖಲಾತಿ ಮಿತಿಯೊಳಗೆ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರಬೇಕು.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ಅನುಮತಿ ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಸಂಸ್ಥೆ ನಡೆಯುತ್ತಿರಬೇಕು. ಸರ್ಕಾರ ಅಥವಾ ಎನ್.ಸಿ.ಟಿ.ಇ ಅನುಮತಿ / ಆದೇಶವಿಲ್ಲದೆ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿಲ್ಲ.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಲಾಗಿರುವ ಮಾಧ್ಯಮಕ್ಕೆ ಸಂಸ್ಥೆಯವರು ಅಭ್ಯರ್ಥಿಗಳನ್ನು ದಾಖಲಿಸಿಕೊಂಡಿರಬೇಕು. ಜಿಲ್ಲಾ ಡಯಟ್ ಪ್ರಾಂಶುಪಾಲರುಗಳು ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಿರುವ ಮಾಧ್ಯಮಕ್ಕೆ ದಾಖಲಾತಿ ಅನುಮೋದಿಸಿರಬೇಕು.
- ಆನ್‌ಲೈನ್ ಮೂಲಕ ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಡಯಟ್ ಲಾಗಿನ್‌ನಲ್ಲಿ ಪರಿಶೀಲಿಸಿ ಅನುಮೋದಿಸುವುದು.
- ಆನ್‌ಲೈನ್ ಮೂಲಕ ಅಭ್ಯರ್ಥಿಗಳ ಆಂತರಿಕ ಹಾಗೂ ಪ್ರಾಯೋಗಿಕ ಅಂಕಗಳನ್ನು ಡಯಟ್ ಲಾಗಿನ್‌ನಲ್ಲಿ ಅನುಮೋದಿಸುವುದು.

- ಮಾಧ್ಯಮ ಬದಲಾವಣೆಗೆ ಸರ್ಕಾರದ ಅನುಮತಿ ಅಗತ್ಯತೆ ಇದೆ. ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಸಂಸ್ಥೆ ಮಾಧ್ಯಮ ಬದಲಾವಣೆ ಮಾಡಿಕೊಂಡಿದ್ದಲ್ಲಿ ಆ ಸಂಸ್ಥೆಯ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಕೇಂದ್ರೀಕೃತ ದಾಖಲಾತಿ ಘಟಕದಿಂದ ಸರ್ಕಾರಿ ಕೋಟಾಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿರಬೇಕು. ಹಂಚಿಕೆ ಮಾಡಿರುವ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿ ಕೋಟಾ ಅಭ್ಯರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ ((Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿ ಕೇಂದ್ರಿಕೃತ ದಾಖಲಾತಿ ಘಟಕ ಅಥವಾ ಸರ್ಕಾರದಿಂದ ಅನುಮತಿ ಪಡೆದು ಸರ್ಕಾರಿ ಕೋಟಾದ ಉಳಿಕೆ ಸೀಟುಗಳಿಗೆ ದಾಖಲಾತಿ ಮಾಡಿಕೊಂಡಿದ್ದಲ್ಲಿ, ಡಯಟ್ ಪ್ರಾಂಶುಪಾಲರಿಂದ ಅನುಮೋದಿತವಾಗಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿ.ಇಎಲ್.ಇಡಿ ಕಾಲೇಜುಗಳು ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಳಿಯಿಂದ ಕೇಳಿದಾಗ ಅದನ್ನು ಮಂಡಳಿಗೆ ಸಲ್ಲಿಸುವುದು.
- ಡಯಟ್ ಹಂತದಲ್ಲಿ ಕಾಲೇಜುಗಳಿಂದ ಸ್ವೀಕರಿಸಲಾದ ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಚಲನ್‌ಗಳನ್ನು ಪರಿಶೀಲಿಸಿ ಚಲನ್‌ಗಳನ್ನು ಕ್ರೋಢೀಕರಿಸಿ ಮಂಡಳಿಗೆ ಕಳುಹಿಸುವುದು.

**19.** ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶಿಲಿಸಿ ಸಂಸ್ಥೆಯ Loginಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ಮಂಡಳಿಯಿಂದ ಸೂಚಿಸಲ್ಪಟ್ಟ ನಿಗದಿತ ದಿನದೊಳಗೆ ದೋಷಗಳಿದ್ದಲ್ಲಿ ಸರಿಪಡಿಸುವುದು.

**20. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಸಲ್ಲಿಸುವ ಬಗ್ಗೆ.**

ಕಳೆದ ಸಾಲಿನಿಂದ ಅಭ್ಯರ್ಥಿಗಳು ಪಡೆದ ಆಂತರಿಕ ಮೌಲ್ಯಮಾಪನ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್‌ಲೈನ್‌ನಲ್ಲಿಯೇ ಭರ್ತಿ ಮಾಡಬೇಕಾಗುತ್ತದೆ. ಇದಕ್ಕಾಗಿ ಸಂಸ್ಥೆಗಳ ಲಾಗಿನ್‌ನಲ್ಲಿ ನಮೂನೆಗಳನ್ನು ಅಪ್‌ಲೋಡ್ ಮಾಡಲಾಗುವುದು. ಸಮನ್ವಯ ಸಮಿತಿಯು ಮೌಲ್ಯಮಾಪನ ಮಾಡಿ ನೀಡಿರುವ ಅಂಕಗಳನ್ನು Upload ಮಾಡಲಾದ ನಮೂನೆಗಳಲ್ಲಿ **"Online Mark Porting"** ಮೂಲಕ ಮಂಡಳಿಗೆ ಸಲ್ಲಿಸಬೇಕು.

ಸಂಸ್ಥೆಗಳ ಮುಖ್ಯಸ್ಥರು ಈ ಅಂಕಗಳನ್ನು ಭರ್ತಿ ಮಾಡಿ ಸಲ್ಲಿಸಿದ ನಂತರ ಸಂಬಂಧಿಸಿದ ಡಯಟ್‌ಗೆ ಸಮನ್ವಯ ಸಮಿತಿಯು ನೀಡಿದ ಮೂಲ ದಾಖಲೆಗಳನ್ನು ಸಲ್ಲಿಸಬೇಕು. ಡಯಟ್ ಪ್ರಾಂಶುಪಾಲರು ಸಮನ್ವಯಸಮಿತಿಯು ನೀಡಿರುವ ಅಂಕಗಳಿಗೂ ಹಾಗೂ ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡಿರುವ ಅಂಕಗಳಿಗೂ ತಾಳೆಯಾಗುತ್ತಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಇದನ್ನು ಅನುಮೋದಿಸಬೇಕು. ವ್ಯತ್ಯಾಸವಿದ್ದಲ್ಲಿ ಡಯಟ್ ಪ್ರಾಂಶುಪಾಲರು ಇದನ್ನು ಮಂಡಳಿಯ ಗಮನಕ್ಕೆ ತರುವುದು.

ಒಂದು ವೇಳೆ ವ್ಯತ್ಯಾಸವಾದಲ್ಲಿ ಪ್ರತಿ ದೋಷಕ್ಕೆ ಸಂಸ್ಥೆಯ ಮುಖ್ಯಸ್ಥರಿಗೆ ತಲಾ ರೂ. 1000/-ದಂತೆ ದಂಡ ವಿಧಿಸಲಾಗುವುದು. ದಂಡವನ್ನು ಪಾವತಿಸಿ ಡಯಟ್ ಪ್ರಾಂಶುಪಾಲರ ಮುಖಾಂತರ ಮನವಿ ಸಲ್ಲಿಸಿದಲ್ಲಿ ಸರಿಪಡಿಸುವ ಬಗ್ಗೆ ಕ್ರಮವಹಿಸಲಾಗುವುದು. ಈ ಕುರಿತಂತೆ ಮಾರ್ಗಸೂಚನೆಗಳೊಂದಿಗೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ನೀಡಲಾಗುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಡಯಟ್ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

<u>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ</u>

**1.ಶ್ರೀಮತಿ, ಟಿ.ಡಿ.ಶೈಲ ಸಹಾಯಕ ನಿರ್ದೇಶಕರು, ಡಿಇಡಿ ಶಾಖೆ, ಮೊಬೈಲ್ ಸಂಖ್ಯೆ:9480343741**

**2.ಶ್ರೀ, ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ ಮೊಬೈಲ್ ಸಂಖ್ಯೆ:7892195954**

2/7/2021

(ಎಸ್.ಗೀತಾ)

**ನಿರ್ದೇಶಕರು (ಇತರೆ ಪರೀಕ್ಷೆಗಳು)**

**ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು**

<u>ಪ್ರತಿಗಳು :-</u>

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ವಿಭಾಗೀಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ, ಧಾರವಾಡ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
7. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
8. ಕಛೇರಿ ಪ್ರತಿ.